**ದಿನಾಂಕ 16-07-2015 ರಂದು ನಡೆದ ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದವರು:**

1) ಶ್ರೀ ಎ.ಕೆ.ಎಂ. ನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು,
2) ಶ್ರೀ ಟಿ. ರಾಮನಾಯಕ್, ರಾಜ್ಯ ಮಾಹಿತಿ ಆಯುಕ್ತರು,
3) ಶ್ರೀ ಎಸ್.ಡಿ. ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು,
4) ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು,
5) ಶ್ರೀ ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ,
6) ಶ್ರೀ ಬಿ. ಶ್ರೀರಾಮರೆಡ್ಡಿ, ಕಾನೂನು ಅಧಿಕಾರಿ,
7) ಶ್ರೀಮತಿ ಶ್ರೀಲತ ಕೋಟೆಮಠ್, ಅಧೀನ ಕಾರ್ಯದರ್ಶಿ,

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

2014-15ನೇ ಸಾಲಿನ ವಾರ್ಷಿಕ ವರದಿ:

1) 2014-15ನೇ ಸಾಲಿನ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಟ್ಟು, ಚರ್ಚೆ ಪ್ರಾರಂಭಿಸಿದರು. ಆಡಳಿತ ವರದಿಯ 4ನೇ ಅಧ್ಯಾಯಕ್ಕೆ ಸಂಬಂಧಿಸಿದಂತೆ ಆಯೋಗದ ವರದಿಯಲ್ಲಿ ಸೇರಿಸಬೇಕಾದ ಇತರೇ ಇಲಾಖೆಗಳ ಮಾಹಿತಿ ಕೋರಿಕೆ ಅರ್ಜಿಗಳ ಸಂಖ್ಯೆ, ವಿಲೇವಾರಿ ಇನ್ನಿತರ ಮಾಹಿತಿಗಳನ್ನು ಎಲ್ಲಾ ಇಲಾಖೆಗಳಿಂದ ತರಿಸಲು ಪತ್ರ ಬರೆಯಲಾಗಿದ್ದು, ಅವುಗಳಲ್ಲಿ 7 ಇಲಾಖೆಗಳು ಮಾತ್ರ ಈವರೆವಿಗೂ ಮಾಹಿತಿಯನ್ನು ನೀಡಿದ್ದು, ಉಳಿದಂತೆ ಇರುವ ಇಲಾಖೆಗಳಿಗೆ ನೆನಪೋಲೆಗಳನ್ನು ಹಾಗೂ ಮುಖ್ಯ ಮಾಹಿತಿ ಆಯುಕ್ತರಿಂದ ಅ.ಸಾ ಪತ್ರವನ್ನು ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಹಾಗೂ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೂ ಸಹ ಬರೆಯಲಾಗಿದೆ. ಅವರಿಂದ ಮಾಹಿತಿ ಬಂದ ನಂತವೇ ಈ Chapter ತಯಾರಿಸಲು ಸಾಧ್ಯವಾಗುವುದೆಂದು ಕಾರ್ಯದರ್ಶಿಯವರು ತಿಳಿಸಿದರು. ಉಳಿದಂತೆ ಇನ್ನಿತರ ಎಲ್ಲಾ Chapter ಗಳನ್ನು ಚರ್ಚೆಯೊಂದಿಗೆ ಸಭೆ ಅನುಮೋದಿಸಿತು.

ಕ್ರಮ: ಕಾರ್ಯದರ್ಶಿ

2) ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು, ಇವರು ಈ ಹಿಂದೆ ಸಲ್ಲಿಸಿದ್ದ ಪ್ರಸ್ತಾವನೆಯಂತೆ ಆಯುಕ್ತರುಗಳ ಸೇವಾ ಷರತ್ತು ಹಾಗೂ ನಿಬಂಧನೆಗಳಿಗೆ ಸಂಬಂಧಿಸಿದಂತೆ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳ ಮಾಹಿತಿಯನ್ನು ಎಲ್ಲಾ ರಾಜ್ಯಗಳ ಮಾಹಿತಿ ಆಯೋಗದ

ಆಯುಕ್ತರುಗಳ ಸೇವಾ ಷರತ್ತುಗಳನ್ನು ಅವರು ಪಡೆದು ತುಲಾತ್ಮಕ ಪಟ್ಟಿಯೊಂದಿಗೆ ಸಲ್ಲಿಸಿದ್ದು, ಎಲ್ಲಾ ರಾಜ್ಯಗಳಿಗಿಂತ ಮಹಾರಾಷ್ಟ್ರದ ಮಾಹಿತಿ ಆಯೋಗದ ಆಯುಕ್ತರುಗಳ ಸೇವಾ ಷರತ್ತುಗಳನ್ನು ಒಪ್ಪಬಹುದಾಗಿದ್ದು, ಅದರಂತೆಯೆ ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರುಗಳ ಸೇವಾ ಷರತ್ತು ನಿಬಂಧನೆಗಳನ್ನು ತಯಾರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲು ಸಭೆ ಸಮ್ಮತಿಸಿತು.

ಕ್ರಮ: ಕಾರ್ಯದರ್ಶಿ

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

24/7/15

24/7

24/7/15